"ದೊಡ್ಡಮ್ಮಾರ ಕಾಲದಿಂದಾನೂ... ಅವರೇ ನನ್ನ ತಂದು ಇಲ್ಲಿ ಇರಿಸಿದ್ದು. ಆಗಿಂದ ಬುದ್ಯೋರ್ಗೆ ಅಷ್ಟೆ ತಿಂಡಿ ಮಾಡಿಟ್ಟು ಹೋಗ್ತೀದ್ದೀನಿ. ಪಾಪ ಅವರು ಒಂಟಿ ಜೀವ" ಎಂದು ವಿಷಾದಿಸಿದಳು. "ಸರೋಜಮ್ಮ ನೀವಿವತ್ತು ಮನೆಗೆ ಹೋಗಿ ಅಡಿಗೆ ನಾನೇ ಮಾಡ್ತೀನಿ" ಎಂದವಳನ್ನು ಅಚ್ಚರಿಯಿಂದ ನೋಡುತ್ತಾ ನನ್ನ ಕಣ್ಣನ್ನೊಮ್ಮೆ ಪ್ರಶ್ನಾರ್ಥಕವಾಗಿ ನೋಡಿದಾಗ ನಾನೂ "ಹೂಂ" ಎನ್ನುವ ಸನ್ನೆ ಮಾಡಿಬಿಟ್ಟಿದ್ದೆ. ನಾನು ದ್ವೇಷಿಸಲೂ ಅನರ್ಹವಾದ ಈ ಹೆಣ್ಣಿನ ಸಾಮೀಪ್ಯವನ್ನು ಒಂದು ದಿನದ ಮಟ್ಟಿಗಾದರೂ ಅನುಭವಿಸುವ ನನ್ನ ಅಂತರಂಗದ ಹಪಹಪಿ ನನಗೇ ಅರ್ಥವಾಗಲಿಲ್ಲ.

ಈರುಳ್ಳಿ ಆಲೂಗಡ್ಡೆ ಹುಳಿ, ಅರಳು ಸಂಡಿಗೆ ಬಾಳಕ ಕರಿದು ತಟ್ಟೆಯಿಟ್ಟು ಆಸ್ಥೆಯಿಂದ ಊಟ ಬಡಿಸಿ ತಾನೂ ಎದುರು ಕುಳಿತು ಉಂಡು ಅಡಿಗೆ ಮನೆ ಓರಣಗೊಳಿಸಿ... ಅಯಾಚಿತವಾಗಿ ನಮ್ಮ ಮಲಗು ಕೋಣೆಗೆ ಬಂದು ಮಲಗಿ ಹತ್ತೇ ನಿಮಿಷದಲ್ಲಿ ಮೈಮರೆತು ಮಲಗಿ ಬಿಟ್ಟಳು. ಇಲ್ಲ, ನನ್ನಿಂದ ನಿದ್ರಿಸಲಾಗಲಿಲ್ಲ. ನಮ್ಮಿಬ್ಬರ ನಡುವೆ ಅದೆಲ್ಲಾ ನಡೆದ ಮೇಲೂ ಏನೂ ಆಗಿಲ್ಲದಂತೆ ನಾನು ನಿದ್ರಿಸಲಾಗುತ್ತಿಲ್ಲ. ಅವಳಿಗಿದು ಹೇಗೆ ಸಾಧ್ಯ? ನಾನವಳ ನಿರಂತರ ನೆನಪಿನ ಹೊಡೆತದಿಂದ ತಪ್ಪಿಸಿಕೊಳ್ಳುವುದೇ ಧ್ಯೇಯವಾಗಿದ್ದ ದಿನಗಳೆಲ್ಲಾ ಮುಗಿದು ಈಗ ನಾನು ನನ್ನಷ್ಟಕ್ಕೆ ಸ್ವತಂತ್ರನೆಂದುಕೊಂಡು ಬದುಕೊಂದನ್ನು ಕಟ್ಟಿಕೊಂಡ ಮೇಲೆ... ಅಥವಾ ಹಾಗೆಂದುಕೊಂಡ ಮೇಲೆ... ಹಾಗೆಂದುಕೊಂಡದ್ದೆಲ್ಲ ಸುಳ್ಳಿರಬೇಕೆನಿಸುವಂತೆ ಅಥವಾ ಇವಳನ್ನು ಕಂಡಾದ ಮೇಲೆ ಹೀಗೆನಿಸುತ್ತಿದೆಯೇ? ಕಾಣದಿದ್ದಾಗಲೂ ಕಾಡಲಿಲ್ಲವೆ ಇವಳು? ಇವಳು ಕೊಟ್ಟ ಒಂಟಿತನದ ಬಳುವಳಿಗೆ ನನ್ನಂತರಂಗದ ಏಕಾಂಗಿತನವೂ ಬೆರೆತು... ನಾನು ಸೋತೆನೋ... ಗೆದ್ದೆನೋ... ಯಾವುದೂ ಖಚಿತವಲ್ಲದಿರುವಾಗ... ಇಷ್ಟು ವರ್ಷಗಳ ನಂತರ ಏಕಾಏಕಿ ಧುತ್ತೆಂದು ಎದುರು ಬಂದಳೆಂದರೆ... ನನ್ನದೇ ಮನೆಗೆ ಬಂದು ಏನೂ ಘಟಿಸಿಲ್ಲದಂತೆ ನಿಂತಳೆಂದರೆ... ಅವಳ ಆತ್ಮಪ್ರತ್ಯಯವೇ ಶ್ರೇಷ್ಠವಿರಬಹುದು. ಅವಳಿಲ್ಲಿಗೆ ಬಂದಿರುವುದು ಅವನಿಗೆ ತಿಳಿದಿರಲಿಕ್ಕೂ ಸಾಕು. ಅವನೇನು ನನ್ನಂತಿನ ಗಂಡಸಲ್ಲವಲ್ಲ! ಎಲ್ಲಾ ತಿಳಿದೂ ಸುಮ್ಮನಿರಲು, ಏನೂ ಮಾಡದಿರಲು! ಅವಳಿಲ್ಲಿಗೆ ಬಂದಿದ್ದು ತಿಳಿದುಬಿಟ್ಟರೆ ಅವಳನ್ನು ಅಡ್ಡಡ್ಡ ಸೀಳಿ ಹಾಳು ಬಾವಿಗೆ ಎಸೆದಾನವನು. ಇಷ್ಟಕ್ಕೂ ಯಾರವನು? ಅವನೇನು ಅವಳ ಗಂಡನಲ್ಲವಲ್ಲ. ನನ್ನ ಹೆಂಡತಿ ನನ್ನ ಮನೆಗೆ ಬಂದರೆ ಅವನಿಗೇನು? ಇದೆಲ್ಲಾ ತಲೆನೋವು ನನಗಾದರೂ ಯಾಕೆ? ಅವಳಿಗೇ ಇಲ್ಲದ್ದು... ಒಮ್ಮೆ ಮಗ್ಗಲು ಬದಲಾಯಿಸಿ ನಿಡುಸುಯ್ಯುತ್ತಾ ಹೊರಳಿದೆ. ಬಾಗು ಬಳುಕು ಉಬ್ಬುತಗ್ಗುಗಳ ಮಾದಕ ಶರೀರ ಇನ್ನೂ ತನ್ನ ಚೆಲುವು ಕಳಕೊಳ್ಳದೆ ಬಿಗುಪಾಗಿತ್ತು. ಅದೆಷ್ಟೋ ಮಧುರಾತ್ರಿಗಳನ್ನು ಕಳೆದ ಇದೇ ಕೊಠಡಿಯ ಇದೇ ಹಾಸಿಗೆಯಲ್ಲಿ ಅವಳಿಂದು ಮಲಗಿದ್ದಾಳೆ. ನಾನು ನಿಷ್ಕ್ರಿಯನಾಗಿ ಮಲಗಿದ್ದೇನೆ. ಇಲ್ಲ. ಅವಳನ್ನು ಮುಟ್ಟಲೂ ನನ್ನಿಂದ ಸಾಧ್ಯವಾಗುತ್ತಿಲ್ಲ. ಅವಳ ಮೈ ಹೊಲಸು, ಹೇಸಿಗೆಯೆಂಬ ಯಾವ ಇರಾದೆಯೂ ನನ್ನದಲ್ಲ. ಆದರೂ... ಇವಳನ್ನು... ಅವಳು ಹೊರಡುವ ಹಿಂದಿನ ರಾತ್ರಿಯೂ ನನ್ನೊಡನೆ ಬೆರೆತಿದ್ದಳು. ಮಾಮೂಲಿಗಿಂತ ಹೆಚ್ಚು ಉತ್ಕಟವಾಗಿ... ತೆರೆದುಕೊಂಡಿದ್ದಳು. ನಾನಾದಿನ ಅದನ್ನು ವಿಶೇಷವೆಂದು ಭಾವಿಸಿರಲಿಲ್ಲ. ಬಹುಶಃ ಅವಳಿಗೆ ತಾನು ಹೊರಟು ಹೋಗುವುದು ಗೊತ್ತಿದ್ದರಿಂದಲೇ ಹಾಗಾಗಿರಬೇಕು. ನನಗೇನೂ ಗೊತ್ತಿರಲಿಲ್ಲ. ಆಗಲೂ... ಈಗಲೂ... ಯಾಕಾಗಿ ಅಮೃತಮತಿಯರು ಸೃಷ್ಟಿಯಾಗುತ್ತಾರೋ?

ಈ ದಿನ ಅವಳನ್ನು ಕೇಳಲೇಬೇಕು. ನನ್ನಿಂದ ಅವನತ್ತ ಸರಿದು ಬಿಡಲು ಯಾವ ಕಾರಣವಿತ್ತೆಂದು? ಹಿಂದೊಮ್ಮೆ ಅವಳು ನನ್ನೊಡನೆ ಮಾತಾಡಲು ಫೋನ್ ಹಚ್ಚಿದ್ದಾಗ ನಾನು ನಿಧಾನಿಸಿ ತಡೆತಡೆದು